ವನ್ಯಜೀಜ ವಿಭಾಗ, ಮಡಿಕೇರಿ	
ಕಾಲೂರು ಗ್ರಾಮ	4.00
ವಿರಾಜಪೇಟೆ ವಿಭಾಗ, ವಿರಾಜಪೇಟೆ	
ತಿತಿಮತಿ –ಚೆನ್ನಂಗಿ	10.00
ಚೆನ್ನಂಗಿ	4.20
ಪೊನ್ನಂಪೇಟೆ – ಕಾನೂರು ಗ್ರಾಮ	2.42
ತಿತಿಮತಿ ವಲಯ	19.50
ವಿರಾಜಪೇಟೆ ವಲಯ	28.55
ತಿತಿಮತಿ ವನ್ಯಜೀವಿ ವಲಯ	9.80
ಒಟ್ಟು	**74.47**
ಸಾರಾಂಶ	
ಮಡಿಕೇರಿ ವಿಭಾಗ	77.65
ವಿರಾಜಪೇಟೆ ವಿಭಾಗ	74.47
ವನ್ಯಜೀವಿ ಉಪ ವಿಭಾಗ	4.00
ಒಟ್ಟು	**156.12**

ಇ) ಸಾಮಾನ್ಯವಾಗಿ ಕಳಪೆ ಕಾಮಗಾರಿ ನಡೆದಿರುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಸರ್ಕಾರದ ಗಮನಕ್ಕೆ ದೂರು ಬಂದಿದೆ.

ಈ) ಸೋಲಾರ್ ಬೇಲಿಗಳ ದುರಸ್ತಿ ಮಾಡಲು ಮತ್ತು ಸೂಕ್ತ ನಿರ್ವಹಣೆ ಬಗ್ಗೆ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ ಇವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

622 (1122) ಶ್ರೀ ಬೋಪಯ್ಯ. ಕೆ.ಜಿ. (ಮಡಿಕೇರಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ಇಲ್ಲಿಯವರೆಗೆ ಎಷ್ಟು ಜನರು ಸತ್ತಿದ್ದಾರೆ; ಎಷ್ಟು ಜನರು ಗಾಯಗೊಂಡಿದ್ದಾರೆ;

ಆ) ಇಂತಹ ಪ್ರಕರಣಗಳಲ್ಲಿ ಒದಗಿಸಲಾದ ಪರಿಹಾರ ಎಷ್ಟು (ಪ್ರತ್ಯೇಕವಾಗಿ ವಿವರವನ್ನು ನೀಡುವುದು);

ಇ) ಬೆಳೆ ನಷ್ಟ ಹಾಗೂ ಪ್ರಾಣ ಹಾನಿಯಾದಾಗ ಈಗ ಕೊಡುವ ಪರಿಹಾರದ ಮೊತ್ತಕ್ಕೆ ಮಾನದಂಡವೇನು (ವಿವರ ಒದಗಿಸುವುದು) ;

ಈ) ನಷ್ಟದ ಪರಿಹಾರ ಮೊತ್ತ ಬಹಳ ಕಡಿಮೆ ಇದ್ದು, ಹೆಚ್ಚಳ ಮಾಡಬೇಕೆಂಬ ಬೇಡಿಕೆಗೆ ಸರ್ಕಾರದ ನಿಲುವೇನು?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ಕಳೆದ 10 ವರ್ಷಗಳಲ್ಲಿ ಮೃತಪಟ್ಟಿ ಹಾಗೂ ಗಾಯಗೊಂಡವರ ವಿವರ ಈ ಕೆಳಗಿನಂತಿದೆ.

ವರ್ಷ	ಮೃತಪಟ್ಟವರ ಸಂಖ್ಯೆ	ಗಾಯಗೊಂಡವರ ಸಂಖ್ಯೆ
1996–97	2	4
1997–98	5	1
1998–99	6	2
1999–00	5	5
2000–01	9	3
2001–02	2	6
2002–03	6	8
2003–04	10	7
2004–05	4	15
2005–06	3	5

ಆ)

ವರ್ಷ	ಮೃತಪಟ್ಟವರ ಕುಟುಂಬಕ್ಕೆ ವಿತರಿಸಲಾದ ಪರಿಹಾರ ಧನ	ಗಾಯಗೊಂಡವರಿಗೆ ವಿತರಿಸಲಾದ ಪರಿಹಾರ ಧನ
1996–97	50,000/–	14,310/–
1997–98	2,00,000/–	1,400/–
1998–99	4,75,000/–	28,000/–
1999–00	5,50,000/–	21,000/–
2000–01	10,00,000/–	25,000/–
2001–02	2,00,000/–	46,777/–
2002–03	5,00,000/–	35,270/–
2003–04	10,00,000/–	53,123/–
2004–05	4,00,000/–	1,29,592/–
2005–06	4,80,000/–	45,750/–

ಇ) ಪ್ರಾಣ ಹಾನಿಗೆ ರೂ. 1.00 ಲಕ್ಷ ಪರಿಹಾರ ನೀಡಲಾಗುತ್ತಿದೆ. ಬೆಳೆನಷ್ಟಕ್ಕೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯೂಎಲ್ 96 ದಿನಾಂಕ: 12–02–2002 ಪ್ರಕಾರ ಪರಿಹಾರ ನೀಡಲಾಗುತ್ತಿದೆ.

ಈ) ವನ್ಯಪ್ರಾಣಿಗಳಿಂದ ಉಂಟಾಗುವ ಮಾನವ ಪ್ರಾಣಹಾನಿ, ಬೆಳೆನಷ್ಟ ಮುಂತಾದ ಪ್ರಕರಣಗಳಿಗೆ ಪರಿಹಾರ ಮೊತ್ತವನ್ನು ಪೆಚ್ಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

623 (1123) ಶ್ರೀ ಬೋಪಯ್ಯ. ಕೆ.ಜಿ. (ಮಡಿಕೇರಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಾಡಾನೆಗಳ ಹಾವಳಿ ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಇ) ಜಿಲ್ಲೆಯಲ್ಲಿ 2003–04, 2004–05, 2005–06ನೇ ಸಾಲಿನಲ್ಲಿ ಕಾಡಾನೆ ಹಾವಳಿಯಿಂದ ರೈತರಿಗೆ ಆದ ನಷ್ಟವೆಷ್ಟು;

ಈ) ಇದಕ್ಕಾಗಿ ಎಷ್ಟು ಪರಿಹಾರ ಒದಗಿಸಲಾಗಿದೆ; (ಕ್ಷೇತ್ರವಾರು ಎಲ್ಲಾ ವಿವರಗಳನ್ನು ಒದಗಿಸುವುದು);

ಶ್ರೀ ಸಿ. ಚನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು ಬಂದಿದೆ.

ಆ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಅರಣ್ಯ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಸ್ಥಳೀಯ ಆನೆ ಓಡಿಸುವ ವಾಚರುಗಳು / ಪಟಾಕಿಗಳ ಸಹಾಯದಿಂದ ಕಾಡಿನಿಂದ ಹೊರಬಂದ ಆನೆಗಳನ್ನು ಕಾಡಿನೊಳಗೆ ಓಡಿಸಲು ಕ್ರಮ ತೆಗೆದುಕೊಳ್ಳುವುದು.
2. ಕಾಡಾನೆಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ನಿರೋಧಕ ಕಂದಕಗಳ ನಿರ್ಮಾಣ ಮಾಡುವುದು.
3. ಕಾಡಾನೆಗಳ ಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.
4. ಕುಂಕಿ ಶಿಬಿರದ ಸಾಕಾನೆಗಳ ಸಹಾಯದಿಂದ ಕಾಡಾನೆಗಳನ್ನು ಕಾಡಿನೊಳಗೆ ಓಡಿಸುವ ಕಾರ್ಯಾಚರಣೆ ಮಾಡಲಾಗುವುದು.
5. ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು. ಇದರಿಂದಾಗಿ ಖಾಸಗಿ ಪ್ರದೇಶಕ್ಕೆ ಆನೆಗಳು ನುಗ್ಗುವುದನ್ನು ತಪ್ಪಿಸಬಹುದು.
6. ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಗುರುತಿಸಿ ಅವುಗಳನ್ನು ಹಿಡಿಯುವುದು.